ರಾಜ್ಯದ ನ್ಯಾಯಾಲಯ, ಈ ರಿಟ್ ಅರ್ಜಿಯನ್ನು ದಿನಾಂಕ 6-3-2003 ರಂದು ವಿಚಾರಣೆಗೆ ತೆಗೆದುಕೊಂಡು, ಅರ್ಜಿದಾರರು ರಿಟ್ ಅರ್ಜಿ ಸಲ್ಲಿಸುವ ಮೊದಲು ಯಾವುದೇ ಆದೇಶಗಳ ಆಧಾರವನ್ನು ಪರಿಶೀಲಿಸದೆ, ಕೇವಲ ದಿನಪತ್ರಿಕೆಯ ಸುದ್ದಿಯನ್ನು ಪರಿಗಣಿಸಿರುವುದನ್ನು ಮನಗಂಡು, ಅರ್ಜಿಯಲ್ಲಿ, ಯಾವುದೇ ಹುರುಳಿಲ್ಲವೆಂದು ತೀರ್ಮಾನಿಸಿ, ರಿಟ್‌ನ್ನು ವಜಾ ಮಾಡಿರುತ್ತಾರೆ.

ಈ ಹಿಂದೆಯೂ ಕೂಡ, ಶ್ರೀಯುತ ಬಿ. ಕೃಷ್ಣಭಟ್ ಅವರ ಮೇಲೆ 1988ರಲ್ಲಿ ಅಂದಿನ ಶಾಸಕರಾದ ಶ್ರೀ ಆರ್. ವೆಂಕಟರಾಮಯ್ಯ ಅವರು ನನಗೆ ಹಕ್ಕುಚ್ಯುತಿಯಾಗಿದೆ ಎಂದು ಆಪಾದಿಸಿದ್ದು, ಆನಂತರ, ಹಕ್ಕು ಬಾಧ್ಯತಾ ಸಮಿತಿಯ ಮುಂದೆ ಶ್ರೀ ಬಿ. ಕೃಷ್ಣಭಟ್ ಅವರು ಕ್ಷಮಾಯಾಚನೆ ಮಾಡಿದ ಹಿನ್ನೆಲೆಯಲ್ಲಿ, ಪ್ರಕರಣವನ್ನು ಮುಕ್ತಾಯಗೊಳಿಸಲಾಗಿತ್ತು. ಅದೇ ರೀತಿ ಈಗಲೂ ಕೂಡ, ಶ್ರೀಯುತ ಬಿ. ಕೃಷ್ಣಭಟ್ ಅವರು ಸತ್ಯಾಸತ್ಯತೆಯನ್ನು ಪರಿಶೀಲಿಸದೆ, ಶಾಸಕರು ವಿದೇಶ ಪ್ರವಾಸ ಮಾಡಿದ್ದಾರೆ / ಮಾಡುತ್ತಿದ್ದಾರೆ, ಎಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿ, ಶಾಸಕರ ಗೌರವ, ಘನತೆಗೆ ಹಾಗೂ ಕಾರ್ಯನಿರ್ವಹಣೆಗೆ ಕಳಂಕ ಹಾಗೂ ಅಡಚಣೆ ಉಂಟು ಮಾಡಿರುವುದು, ಕಂಡು ಬರುತ್ತದೆ. ಈ ರೀತಿ, ಶ್ರೀಯುತರು ಪದೇ ಪದೇ ಶಾಸಕರ ಮೇಲೆ ಪೂರ್ವಾಪರ ಯೋಚಿಸದೇ, ಆಪಾದಿಸುವುದು ತರವಲ್ಲ. ಇಂತಹ ಪ್ರವೃತ್ತಿಗಳಿಗೆ, ಇತಿಶ್ರೀ ಹಾಡುವ ಹಿನ್ನೆಲೆಯಲ್ಲಿ, ಈ ಸೂಚನೆಯನ್ನು, ಸಂವಿಧಾನದ 211 ಮತ್ತು 212ನೇ ವಿಧಿಯ ಪರಿಮಿತಿಗೆ ಒಳಪಟ್ಟಂತೆ ಹಾಗೂ ನ್ಯಾಯಾಲಯದ ಅಧಿಕಾರಕ್ಕೆ ಧಕ್ಕೆಯುಂಟಾಗದ ರೀತಿಯಲ್ಲಿ ವಿಷಯವನ್ನು ಪರಿಶೀಲಿಸಲು, ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸುತ್ತೇನೆ.

5) ವಿಷಯ:- ಸಿ.ಇ.ಟಿ. ಬಗ್ಗೆ

ಅಧ್ಯಕ್ಷರು:- ಭೈರೇಗೌಡರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಎಲ್ಲಾ ಸಂತೋಷವಾಗಿ ಯುಗಾದಿ ಹಬ್ಬಕ್ಕೆ ಹೋಗೋಣ. ಶೆಟ್ಟರ್ ರವರೇ ಎಲ್ಲಾ ಸಂತೋಷವಾಗಿ ಹಬ್ಬಕ್ಕೆ ಹೋಗೋಣ.

(ಗೊಂದಲ)

ಶ್ರೀ ಸಿ. ಭೈರೆಗೌಡ:- ಮಾನ್ಯ ಅಧ್ಯಕ್ಷರೆ, ಇವತ್ತು ಈ ಸಮಸ್ಯೆ ಸಾಮಾನ್ಯ ಸಮಸ್ಯೆ ಅಲ್ಲ. ವಿದ್ಯಾವಂತ ಯುವಕರಾಗಿರುವವರಿಗೆ ಜೀವನದಲ್ಲಿ ನಿರಾಸೆಯನ್ನು ತರತಕ್ಕಂಥ ಸಮಸ್ಯೆ. ಆ ನಿರಾಸೆಯಿಂದ ಯುವಕರನ್ನು ಪಾರು ಮಾಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ. ಇವತ್ತು ಬಹಳ ಸರಳವಾದ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ರಾಜ್ಯದಲ್ಲಿ ಇರತಕ್ಕಂಥ ಲಕ್ಷಾಂತರ ಯುವಕರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬೇಡಿಕೆಯನ್ನು ಇಟ್ಟಿದ್ದೇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬೇಕಲ್ಲ.

ಅಧ್ಯಕ್ಷರು:- ಅವರ ಕಷ್ಟ ಸುಖ ಹೇಳಿದ್ದಾರಲ್ಲಾ.

ಶ್ರೀ ಸಿ. ಭೈರೇಗೌಡ:- ನಾನು ತಮಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಒಂದು ವೇಳೆ ಸರ್ಕಾರಕ್ಕೆ ಅವರೇನಾದರೂ ಕೂಡ ಸಚಿವ ಸಂಪುಟದಲ್ಲಿ ಅಥವಾ ಉಪಸಮಿತಿಯಲ್ಲಿ ತೀರ್ಮಾನ ಮಾಡಬೇಕು ಅಥವಾ ಅಲ್ಲೋ ಇಲ್ಲೋ ಹೋಗಿ ಕೇಳಿಕೊಂಡು ಬರಬೇಕೆಂದು ಇದ್ದರೆ, ಇವತ್ತು ಸದನವನ್ನು ಮುಂದೂಡಿ ಮೂರು ದಿವಸ ಆದ ಮೇಲೆ ಕರೆಯಿರಿ. ಅವರು

ಹೇಳಿಕೆ ಕೊಡಲಿ. ಅವರು ಹೇಳಿಕೆ ಕೊಟ್ಟಾದ ಮೇಲೆ ಏನು ರಾಜ್ಯದ ಯುವಕರಿಗೆ ಏನು ಪ್ರತಿಫಲ ಸಿಗುತ್ತದೆ ಎಂದು ಹೇಳುತ್ತೇವೆ.

ಅಧ್ಯಕ್ಷರು:- ತಾವು ತಮ್ಮ ತಮ್ಮ ಸೀಟುಗಳಿಗೆ ಹೋಗಿ. ಶೆಟ್ಟರ್ ರವರೇ, ಸುಬ್ಬಾರೆಡ್ಡಿಯವರೆ, ಎಲ್ಲಾ ತಮ್ಮ ತಮ್ಮ ಜಾಗಗಳಿಗೆ ಎಂದು ನಾನು ವಿನಂತೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ:- ತಾವು ಸಾಕಷ್ಟು ಬಿಜಿನಸ್ ಅನ್ನು ಟ್ರಾನ್ಸ್‌ಕ್ಟ್ ಮಾಡಿದ್ದೀರಿ. ಸರ್ಕಾರ ಹೇಳಿಕೆ ಕೊಡುವವರೆಗೂ ನಾವು ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:- ಅವರು ಅವರ ಕಷ್ಟಸುಖವನ್ನು ಹೇಳಿಕೊಂಡಿದ್ದಾರೆ. ನೀವು ಅದನ್ನು ಸ್ವಲ್ಪ ಆಲೋಚನೆ ಮಾಡಿ ನೋಡಿ. ತಾವು ತಮ್ಮ ಸೀಟುಗಳಿಗೆ ಹೋಗಿ ಸಂಪಂಗಿಯವರಿಗೆ ಅವಕಾಶ ಕೊಟ್ಟಿಲ್ಲ, ಅವರು ಮಾತನಾಡುವುದಕ್ಕೆ ಯಾರೂ ಬಿಡಲೇ ಇಲ್ಲ. ಈಗ ಬಿಎಸಿ ಯಲ್ಲಿ ಏನು ತೀರ್ಮಾನವಾಯಿತು ಅದರ ಪ್ರಕಾರವಾಗಿ ಸದನದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಆಗುತ್ತಾ ಇಲ್ಲ, ಬಿಎಸಿ ಮೀಟಿಂಗ್ ಪ್ರಕಾರ ನಮಗೆ ಇನ್ನೂ ಆರು ಗಂಟೆಯವರೆಗೆ ಸಮಯ ಇದೆ. ಬಿಎಸಿ ಮೀಟಿಂಗ್ ಪ್ರಕಾರ ಸದನದ ಕಾರ್ಯಕಲಾಪಗಳನ್ನು ಸೂಸೂತ್ರವಾಗಿ ನಡೆಸಿಕೊಂಡು ಹೋಗಬೇಕಾಗಿರುವುದು ನನ್ನ ಕರ್ತವ್ಯ. ಇಲ್ಲದೇ ಇದ್ದರೆ ಕರ್ತವ್ಯ ಲೋಪವಾಗುತ್ತದೆ. ತಾವು ಹೋಗಿ ಕುಳಿತುಕೊಳ್ಳಿ. ಇನ್ನು ಬೇಕಾದಷ್ಟು ಅಜೆಂಡಾ ಇದೆ. ರಾತ್ರಿ ಹತ್ತು ಗಂಟೆಯವರೆಗೂ ತೆಗೆದುಕೊಳ್ಳಬಹುದು ಅಷ್ಟು ಅಜೆಂಡಾ ಇದೆ. ತಾವು ದಯವಿಟ್ಟು ತಮ್ಮ ಸೀಟಿಗೆ ಹೋಗಿ. ಬಿಎಸಿ ಮೀಟಿಂಗ್‌ನಲ್ಲಿ ಏನು ತೀರ್ಮಾನವಾಗಿದೆ ಎಂದರೆ 31ನೇ ತಾರೀಖು ಸಂಜೆಯವರೆಗೂ ಕಾರ್ಯಕಲಾಪ ನಡೆಸಬೇಕೆಂದು ತೀರ್ಮಾನವಾಗಿದೆ. ಅಲ್ಲಿಯವರೆಗೆ ನಡೆಸಬೇಕಾಗಿರುವುದು ನನ್ನ ಕರ್ತವ್ಯ ಮತ್ತು ಧರ್ಮ. ತಾವು ಎಲ್ಲಾ ತಮ್ಮ ಸೀಟಿಗೆ ಹೋದರೆ ಇನ್ನು ತಮ್ಮ ಮುಂದೆ ವಿಷಯಗಳು ಇದೆ ಅದನ್ನು ಸಂಜೆಯವರೆಗೆ ತೆಗೆದುಕೊಂಡು ಸಭೆಯನ್ನು ಮಾಡೋಣ.

(ಗೊಂದಲ)

ಅಧ್ಯಕ್ಷರು:- ತಾವು ದಯವಿಟ್ಟು ತಮ್ಮ ತಮ್ಮ ಸೀಟುಗಳಿಗೆ ಹೋಗಿ.

(ಗೊಂದಲ)

(ಸದನದ ಬಾವಿಯಲ್ಲಿ ಬಿ.ಜೆ.ಪಿ) ಪಕ್ಷದ ಸದಸ್ಯರು ಮತ್ತು ಜನತಾ ದಳ (ಯು) ಮತ್ತು ಜನತಾ ದಳ (ಎಸ್) ಪಕ್ಷಗಳ ಸದಸ್ಯರು)

ಅಧ್ಯಕ್ಷರು:- ಲಕ್ಷ್ಮೀನಾರಾಯಣರವರೇ, ತಮ್ಮ ಸ್ಥಳಗಳಿಗೆ ಹೋಗಿ, ಈಗ ಸರ್ಕಾರ ತನ್ನ ಅಭಿಪ್ರಾಯವನ್ನು ಒಂದೆರಡು ಸಾರಿಯಲ್ಲ, ನಾಲ್ಕು ಸಲ ಹೇಳಿದ್ದಾರೆ, ಇನ್ನು ಎಷ್ಟು ಸಾರಿ ಹೇಳುವುದಕ್ಕೆ ಆಗುತ್ತದೆ? ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ, ತಮ್ಮ ಸೀಟುಗಳಿಗೆ ಹೋಗುತ್ತಿರೋ, ಇಲ್ಲವೋ? ಕೊನೆಯ ದಿವಸ ಕೊನೆಯದಾಗಿ ಇನ್ನೊಂದು ಸಲ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ತಮ್ಮ ತಮ್ಮ ಸೀಟುಗಳಿಗೆ ಹೋಗಿ, ಈಗ ಅಜೆಂಡಾ ಪ್ರಕಾರ ಕಲಾಪವನ್ನು ತೆಗೆದುಕೊಳ್ಳೋಣ, shall I take up the remaining agenda? come on teli me. ಈಗ ಪ್ರಶ್ನೋತ್ತರವಿದೆ, ಎಲ್ಲರೂ ತಮ್ಮ ಸ್ಥಳಗಳಿಗೆ ಬನ್ನಿ, ಯಾರ್ಯಾರ ಪ್ರಶ್ನೆ ಇದೆ ಕೇಳಿ ಬನ್ನಿ.